ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ವಿಜಯನಗರ, ಮೈಸೂರು-570017
Telephone No. 0821-2417102

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Corporate Office,CESC, Mysuru-570017
Web Site: www.cescmysore.org
E-mail ID:dt@cescmysore.org
dtcescmys@gmail.com

Company Identity Number[CIN]:- U40109KA2004SGC035177

ಕ್ರಮಾಂಕ:ಚವಿನಿತಾಂ/ತಾಂಎ/ /2021-22/ CYS-876 ದಿನಾಂಕ: 21 SEP 2021
ಲಗತ್ತು: 05 ಹಾಳೆ.

## ಸುತ್ತೋಲೆ

ವಿಷಯ :- ದಿನಾಂಕ: 18.08.2021ರಂದು ಮಾನ್ಯ ಇಂಧನ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡಾವಳಿಯ ಕುರಿತು.

ಉಲ್ಲೇಖ :- ಆಪ್ತ ಕಾರ್ಯದರ್ಶಿ, ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು, ಕರ್ನಾಟಕ ಸರ್ಕಾರ ರವರ ಪತ್ರ ಸಂಖ್ಯೆ : ಇಕ&ಸಸ/ಆಕಾ/ಟಿ/105/2021 ದಿನಾಂಕ : 01.09.2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 18.08.2021ರಂದು ಮಾನ್ಯ ಇಂಧನ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡಾವಳಿಯಲ್ಲಿನ ಈ ಕೆಳಕಂಡ ನಿರ್ದೇಶನಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಉಲ್ಲೇಖಿಪತ್ರದನ್ವಯ ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ನಿಯಮಾನುಸಾರ ಅಗತ್ಯ ಕ್ರಮವಹಿಸಿ ನಿಗಮ ಕಛೇರಿಗೆ ಅನುಪಾಲನಾ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ.

1. ಪಡಿತರ ಚೀಟಿ ಇರುವ ಎಲ್ಲಾ ಮನೆಗಳಿಗೂ ವಿದ್ಯುತ್ ಸಂಪರ್ಕ ನೀಡುವುದನ್ನು ಒಳಗೊಂಡಂತೆ ಆಯವ್ಯಯದಲ್ಲಿ ಘೋಷಿಸಿರುವ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಆದ್ಯತೆ ನೀಡುವುದು.
2. ಕೃಷಿ & ಕೈಗಾರಿಕೆಗಳಿಗೆ ಮತ್ತು ಎಲ್ಲಾ ವರ್ಗದ ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಪೂರೈಕೆ ಹಾಗೂ ಸಮರ್ಪಕ ವಿದ್ಯುತ್ ಸರಬರಾಜು ಮಾಡಲು ಕ್ರಮ ವಹಿಸುವುದು.
3. ಬಜೆಟ್‌ನಲ್ಲಿ ಘೋಷಿಸಿರುವ ಕಾರ್ಯಕ್ರಮಗಳು ಮತ್ತು ಕೇಂದ್ರ ಸರ್ಕಾರದ ಸಹಯೋಗದ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಕ್ರಮ ವಹಿಸುವುದು.
4. ಟ್ರಾನ್ಸ್‌ಫಾರ್ಮರ್‌ಗಳ ದುರಸ್ಥಿ, ಬದಲಾವಣೆ ಕುರಿತಂತೆ ಬಹಳಷ್ಟು ದೂರುಗಳು ಬಂದಿರುತ್ತವೆ ಅವುಗಳನ್ನು ಬದಲಾವಣೆ ಮಾಡಲು ವಿಳಂಬ ಮಾಡದೆ 24 ಗಂಟೆಗಳೊಳಗೆ ಆದ್ಯತೆ ಮೇಲೆ ಬದಲಾಯಿಸಲು ಕ್ರಮ ವಹಿಸುವುದು.
   ಮುಂದುವರೆದು, ಕ್ಷೇತ್ರದಲ್ಲಿ ವಿಫಲವಾದ ಪರಿವರ್ತಕಗಳನ್ನು ಬದಲಾಯಿಸುವ ಸಂದರ್ಭಗಳಲ್ಲಿ, ಪರಿವರ್ತಕಗಳನ್ನು ಸಾಗಾಣಿಕೆ ಮಾಡಲು ರೈತ ಗ್ರಾಹಕರೆ ವಾಹನಗಳ ವ್ಯವಸ್ಥೆ ಮಾಡುವಂತಹ ಪರಿಸ್ಥಿತಿ ಇರುವುದಾಗಿ ಅನೇಕ ದೂರುಗಳು ಮಾನ್ಯ ಸಚಿವರ ಗಮನಕ್ಕೆ ಬಂದಿರುವುದರಿಂದ, ಇನ್ನು ಮುಂದೆ ಇಲಾಖೆಯ ವಾಹನಗಳಲ್ಲೇ ಪರಿವರ್ತಕಗಳನ್ನು ಸಾಗಾಣಿಕೆ ಮಾಡುವುದು.
5. ಗಂಗಾ ಕಲ್ಯಾಣ ಯೋಜನೆಯಡಿ ಒಂದು ವರ್ಷಕ್ಕಿಂತ ಹಳೆಯ ಅರ್ಜಿಗಳು ವಿದ್ಯುದ್ದೀಕರಣಕ್ಕೆ ಬಾಕಿ ಇರುವುದರ ಬಗ್ಗೆ ಮಾನ್ಯ ಸಚಿವರ ಬಳಿ ದೂರುಗಳು ಸ್ವೀಕೃತವಾಗುತ್ತಿರುವುದರಿಂದ, ಅರ್ಜಿಗಳು ಸ್ವೀಕೃತವಾದ ಒಂದು ತಿಂಗಳೊಳಗಾಗಿ ತಪ್ಪದೇ ವಿದ್ಯುತ್ ಸಂಪರ್ಕ ಕಲ್ಪಿಸಲು ನಿಯಮಾನುಸಾರ ಕ್ರಮ ವಹಿಸುವುದು.
6. ಚಾವಿಸನಿನಿಯ ಎಲ್ಲಾ ಮಟ್ಟದ ಕಛೇರಿಗಳು "ಗ್ರಾಹಕ ಸ್ನೇಹಿ" ಯಾಗಿ (ಮಧ್ಯವರ್ತಿಗಳ ಅವಶ್ಯಕತೆಗೆ ಅವಕಾಶ ನೀಡದೇ) ಕಾರ್ಯನಿರ್ವಹಿಸುವುದು.
7. ಕೇಂದ್ರ ಇಂಧನ ಮಂತ್ರಾಲಯದ "Revamped Distribution Sector Scheme " ಕಾರ್ಯಕ್ರಮಕ್ಕೆ ಆಗಸ್ಟ್-2021 ಅಂತ್ಯದೊಳಗೆ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಕ್ರಮ ವಹಿಸುವುದು.
8. ನಷ್ಟ ತಡೆಯುವ ಕಾರ್ಯ ಯೋಜನೆ ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡುವ ಕೆಲಸವನ್ನೂ ಸಹ ಕಾಲಮಿತಿಯೊಳಗೆ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸುವುದು.

AGM-2
22/09

9. ಅನಧಿಕೃತ ಸಂಪರ್ಕ, ವಿದ್ಯುತ್ ಸೋರಿಕೆ, ವಿದ್ಯುತ್ ಸಂಪರ್ಕ ನೀಡುವಲ್ಲಿ ವಿಳಂಬ ಇತ್ಯಾದಿ ಕಾರಣಗಳಿಂದ ಇಂಧನ ಸರಬರಾಜು ಕಂಪನಿಗಳಿಗಾಗುವ ನಷ್ಟ ತಡೆಯಲು ಕಾರ್ಯ ಯೋಜನೆ ರೂಪಿಸಿ ಅದನ್ನು ಅನುಷ್ಠಾನಗೊಳಿಸಲು ಅಗತ್ಯ ಕ್ರಮ ವಹಿಸುವುದು.

10. ಹಲವಾರು ವರ್ಷಗಳಿಂದ ಶೇ.20-30% ರಷ್ಟು ಸ್ಥಾವರಗಳಿಗೆ ಈಗಲೂ ಸಹ Electro Mechanical ಮಾಪಕಗಳಿರುವ ಬಗ್ಗೆ ಹಾಗೂ ಇವುಗಳಿಂದ ವಿದ್ಯುತ್ ಬಳಕೆಯ ದಾಖಲಾತಿ ಸಮರ್ಪಕವಾಗಿಲ್ಲವೆಂಬ ವಿಷಯವನ್ನು ವಿ.ಸಕಂಗಳು ಮಾನ್ಯ ಸಚಿವರ ಗಮನಕ್ಕೆ ತರಲಾಗಿ, ಈ Electro Mechanical ಮಾಪಕಗಳನ್ನು ಹಾಗೂ ದಾಖಲು ಮಾಡದ (MNR) ಮಾಪಕಗಳನ್ನು ನಿರಂತರವಾಗಿ ಗುರುತಿಸಿ ಮತ್ತು ಬದಲವಣೆ ಮಾಡಲು ಕಾರ್ಯ ಪ್ರವೃತ್ತರಾಗುವಂತೆ ಸೂಚನೆ ನೀಡಿರುವುದರಿಂದ ಸದರಿ ಕಾರ್ಯವನ್ನು ದೈನಂದಿನ ಕಾರ್ಯಚಟುವಟಿಯಾಗಿ ಪರಿಗಣಿಸಿ ಆಧ್ಯತೆಯ ಮೇರೆಗೆ ಬದಲಾವಣೆ ಮಾಡಲು ಕ್ರಮ ವಹಿಸುವುದು.

11. ವಿದ್ಯುತ್ ಚಾಲಿತ ವಾಹನಗಳು ಹೆಚ್ಚಾಗಿ ಬರುತ್ತಿರುವುದರಿಂದ, ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳನ್ನು ಆರಂಭಿಸಲು ಆದ್ಯತೆ ಹಾಗೂ ಈಗಾಗಲೇ ಗುರುತಿಸಿರುವ ಸ್ಥಳಗಳಲ್ಲಿ ವಿದ್ಯುತ್ ರೀಚಾರ್ಜಿಂಗ್ ಮಾಡುವ ಕಾರ್ಯಕ್ಕೆ ವೇಗ ನೀಡುವಂತೆ ಸೂಚನೆ ನೀಡಲಾಗಿದೆ.

12. ಹೊಸ ವಿದ್ಯುತ್ ಸಂಪರ್ಕ ನೀಡಿಕೆ ಸೇರಿದಂತೆ ವಿವಿಧ ಸೇವೆಗಳನ್ನು 24 ಗಂಟೆಯೊಳಗೆ ಒದಗಿಸುವ ಫಾಸ್ಟ್ರಾಕ್ ಸೆಲ್ ವ್ಯವಸ್ಥೆಯನ್ನು (ಬೆವಿಸಕಂಪನಿಯಲ್ಲಿರುವಂತೆ) ಉಳಿದ ವಿಸಕಂಪನಿಗಳು ಅಳವಡಿಸಿಕೊಳ್ಳಲು ಆದೇಶಿಸಲಾಗಿದೆ.

- ಹೊಸ ವಿದ್ಯುತ್ ಸಂಪರ್ಕ (New Connections)
- ಹೆಸರು ಬದಲಾವಣೆ (Name Change)
- ಜಕಾತಿ (Tariff) ಬದಲಾವಣೆ (Change of Tariff)
- ವಿದ್ಯುತ್ ಹೊರೆಯ ಹೆಚ್ಚಳ/ ಇಳಿಕೆ (Load enhancement / reduction)

13. Fast track cell ಕುರಿತು ಬೆಸ್ಕಾಂವತಿಯಿಂದ ಒಂದು ವಾರದೊಳಗೆ ಕಾರ್ಯಗಾರವನ್ನು ಆಯೋಜಿಸುವಂತೆ ಹಾಗೂ Fast track cell ಬದಲಿಗೆ ಕನ್ನಡದ ಸೂಕ್ತ ಹೆಸರನ್ನು ನೀಡಲು ಸಹ ಸೂಚಿಸಲಾಗಿದೆ.

14. ಮುಂದಿನ 100 ದಿನಗಳ ಕಾಲಮಿತಿಯಲ್ಲಿ ಏನೆಲ್ಲ ಯೋಜನೆಗಳನ್ನು ಅನುಷ್ಠಾನಗೊಳಿಸಬಹುದು ಎಂಬ ಬಗ್ಗೆ ಪರಾಮರ್ಶೆ ಮಾಡುವಂತೆ ತಿಳಿಸಲಾಗಿದೆ.

15. ಅರಣ್ಯ ಇಲಾಖೆಯಲ್ಲಿ ಬಾಕಿ ಇರುವ ಕೆಪಿಟಿಸಿಎಲ್ ಮತ್ತು ವಿಸಕಂಗಳ ಪ್ರಸ್ತಾವನೆಗಳ ಬಗ್ಗೆ ಚರ್ಚಿಸಲು 10 ದಿನಗಳೊಳಗೆ ಸಭೆಯನ್ನು ಆಯೋಜಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಚಾವಿಸನಿನಿ ವ್ಯಾಪ್ತಿಯಲ್ಲಿ ಬರುವ ಅರಣ್ಯ ಇಲಾಖೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ನಿಗಮ ಕಛೇರಿಯ ತಾಂತ್ರಿಕ ಶಾಖೆಗೆ ಸಲ್ಲಿಸುವುದು.

16. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳ / ನಗರ ಪ್ರದೇಶಗಳಲ್ಲಿ ಪಾದಚಾರಿ ಮಾರ್ಗಗಳ ಮೇಲೆ ಅಳವಡಿಸಿರುವ ಪರಿವರ್ತಕ ಕೇಂದ್ರಗಳನ್ನು (DTC), ಉಚ್ಚನ್ಯಾಯಾಲಯದ ಆದೇಶದಂತೆ Special Design Transformer Center ಗಳಿಂದ ಬದಲಾಯಿಸಲು ಕ್ರಮವಹಿಸುವುದು.

17. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳ / ನಗರ ಪ್ರದೇಶಗಳಲ್ಲಿ Overhead ಮಾರ್ಗಗಳನ್ನು ಭೂಗತ ಕೇಬಲ್‌ನೊಂದಿಗೆ ಬದಲಾಯಿಸುವ ಬಗ್ಗೆ ಆರ್ಥಿಕ ಕಾರ್ಯಸಾಧ್ಯತೆಯನ್ನು ಪರಿಶೀಲಿಸಿ ಅದಕ್ಕನುಗುಣವಾಗಿ, ಪ್ರಸ್ತಾವನೆಯನ್ನು ನಿಗಮ ಕಛೇರಿಗೆ ಸಲ್ಲಿಸಲು ಕ್ರಮವಹಿಸುವುದು.

ನಿರ್ದೇಶಕರು (ತಾಂತ್ರಿಕ)
ಚಾ.ವಿ.ಸ.ನಿ.ನಿ., ಮೈಸೂರು.

ಪ್ರತಿಗಳು:

1. ಮುಖ್ಯ ಇಂಜನಿಯರ್(ವಿ), ಕಾ ಮತ್ತು ಪಾ ವಲಯ, ಚಾವಿಸನಿನಿ, ಮೈಸೂರು/ ಹಾಸನ.
2. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು
3. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಚಾಮರಾಜನಗರ-ಕೊಡಗು, ಮೈಸೂರು, ಹಾಸನ, ಮಂಡ್ಯ.
4. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ,ಚಾವಿಸನಿನಿ.
5. ಉಪಪ್ರಧಾನ ವ್ಯವಸ್ಥಾಪಕರು (ಎಂ.ಐ.ಎಸ್), ನಿಗಮ ಕಾರ್ಯಾಲಯ, ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
6. ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ಕಾರ್ಯನಿರ್ವಾಹಕ ಸಹಾಯಕರು ಹಾಗೂ ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು.

ಮು.ಕ/ಕ.ಪ್ರ.

18) ವಿ.ಸ.ಕಂಪನಿಗಳ ಆ.ವ 2021-22 ರ ಬಂಡವಾಳ ವೆಚ್ಚದ ವಿವರ, ಜಾಗೃತ ದಳದ ಚಟುವಟಿಕೆಗಳು, ಪ್ರವಾಹದಿಂದಾಗಿ ಹಾನಿಗೊಳಗಾದ ವಿದ್ಯುತ್ ಮಾರ್ಗ(Includes Poles, Transformers and Lines etc..) ಮತ್ತು ಸುರಕ್ಷತಾ ಕ್ರಮಗಳ ಬಗ್ಗೆ ವಿವರಗಳನ್ನು ಸಭೆಯಲ್ಲಿ ಮಂಡಿಸಿದರು.

**ಅಂತಿಮವಾಗಿ ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಈ ಕೆಳಕಂಡ ನಿರ್ದೇಶನಗಳನ್ನು ನೀಡಿದರು:**

1) ಪಡಿತರ ಚೀಟಿ ಇರುವ ಎಲ್ಲ ಮನೆಗಳಿಗೂ ವಿದ್ಯುತ್ ಸಂಪರ್ಕ ನೀಡುವುದನ್ನೂ ಒಳಗೊಂಡಂತೆ ಆಯವ್ಯಯದಲ್ಲಿ ಘೋಷಿಸಿರುವ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಆದ್ಯತೆ ನೀಡುವುದು.
2) ಕೃಷಿ ಮತ್ತು ಕೈಗಾರಿಕೆಗಳಿಗೆ ಮತ್ತು ಎಲ್ಲಾ ವರ್ಗದ ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಪೂರೈಕೆ ಹಾಗೂ ಸಮರ್ಪಕ ವಿದ್ಯುತ್ ಸರಬರಾಜು.
3) ಬಜೆಟ್ ನಲ್ಲಿ ಘೋಷಿಸಿರುವ ಕಾರ್ಯಕ್ರಮಗಳು ಮತ್ತು ಕೇಂದ್ರ ಸರ್ಕಾರದ ಸಹಯೋಗದ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸುವಂತೆ ಸೂಚಿಸಿದರು.
4) ಟ್ರಾನ್ಸ್ ಫಾರ್ಮರ್‌ಗಳ ದುರಸ್ಥಿ, ಬದಲಾವಣೆ ಕುರಿತಂತೆ ಬಹಳಷ್ಟು ದೂರುಗಳು ಬಂದಿರುರುತ್ತವೆ. ಅವುಗಳನ್ನು ಬದಲಾವಣೆ ಮಾಡಲು ವಿಳಂಬ ಮಾಡದೆ 24 ಗಂಟೆಗಳೊಳಗೆ ಆದ್ಯತೆ ಮೇಲೆ ಬದಲಾಯಿಸಲು ಕ್ರಮ ವಹಿಸಲು ಸೂಚಿಸಿದರು.

   ಮುಂದುವರೆದು, ಕ್ಷೇತ್ರದಲ್ಲಿ ವಿಫಲವಾದ ಪರಿವರ್ತಕಗಳನ್ನು ಬದಲಾಯಿಸುವ ಸಂದರ್ಭಗಳಲ್ಲಿ, ಪರಿವರ್ತಕಗಳನ್ನು ಸಾಗಾಣೆ ಮಾಡಲು ರೈತ ಗ್ರಾಹಕರೇ ವಾಹನಗಳ ವ್ಯವಸ್ಥೆ ಮಾಡುವಂತಹ ಪರಿಸ್ಥಿತಿ ಇರುವುದಾಗಿ ಅನೇಕ ದೂರುಗಳು ಬರುತ್ತಿರುವುದರಿಂದ, ಇನ್ನು ಮುಂದೆ ಇಲಾಖೆಯ ವಾಹನಗಳಲ್ಲೇ ಪರಿವರ್ತಕಗಳನ್ನು ಸಾಗಾಣೆ ಮಾಡುವಂತೆಯೂ ಹಾಗೂ ಈ ಬಗ್ಗೆ ಕ್ಷೇತ್ರಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿ ಸುತ್ತೋಲೆಯನ್ನು ಹೊರಡಿಸುವಂತೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಸೂಚಿಸಿದರು.
5) ಗಂಗಾ ಕಲ್ಯಾಣ ಯೋಜನೆಯಡಿ ಒಂದು ವರ್ಷಕ್ಕಿಂತ ಹಳೆಯ ಅರ್ಜಿಗಳು ವಿದ್ಯುದೀಕರಣಕ್ಕೆ ಬಾಕಿ ಇರುವುದರ ಬಗ್ಗೆ ದೂರುಗಳು ಸ್ವೀಕೃತವಾಗುತ್ತಿರುವುದರಿಂದ, ಅರ್ಜಿಗಳು ಸ್ವೀಕೃತವಾದ ಒಂದು ತಿಂಗಳೊಳಗಾಗಿ ತಪ್ಪದೇ ವಿದ್ಯುತ್ ಸಂಪರ್ಕ ಕಲ್ಪಿಸಲು ಸೂಚಿಸಿದರು.
6) ವಿಸಕಂ ಗಳ ಎಲ್ಲಾ ಮಟ್ಟದ ಕಛೇರಿಗಳು "ಗ್ರಾಹಕ ಸ್ನೇಹಿ" ಯಾಗಿ (ಮಧ್ಯವರ್ತಿಗಳ ಅವಶ್ಯಕತೆಗೆ ಅವಕಾಶ ನೀಡದೇ) ಕಾರ್ಯನಿರ್ವಹಿಸಲು ಸೂಚಿಸಿದರು.

11) ಗಂಗಾಕಲ್ಯಾಣ ಯೋಜನೆ ಅಡಿಯಲ್ಲಿ ಪ್ರತಿ ಪಂಪ್ ಸೆಟ್ ಗಳ ವಿದ್ಯುದಿಕರಣಕ್ಕೆ ಪ್ರಸ್ತುತ ಬಿಡುಗಡೆಯಾಗುತ್ತಿರುವ ರೂ.50,000 ಗಳು ಬಹಳ ಹಿಂದೆ ನಿಗದಿಯಾಗಿದ್ದು, ಸದರಿ ಮೊತ್ತವನ್ನು ರೂ.1.00 ಲಕ್ಷದಿಂದ ರೂ.1.20 ಲಕ್ಷಕ್ಕೆ ಹೆಚ್ಚಿಸುವಂತೆ ಅಭಿವೃದ್ಧಿ ನಿಗಮಗಳಿಗೆ ಕೋರಾಲಾಗಿರುವ ವಿಷಯವನ್ನು ಸಭೆಯಲ್ಲಿ ತಿಳಿಸಿದರು.

12) ಎಲ್ಲಾ ವಿ.ಸ.ಕಂಪನಿಗಳಲ್ಲಿ ಕುಡಿಯುವ ನೀರಿನ ಯೋಜನೆ ಅಡಿಯಲ್ಲಿ ವಿದ್ಯುದೀಕರಣಕ್ಕಾಗಿ ನೊಂದಾವಣೆಗೊಂಡ ಅರ್ಜಿಗಳು, ವಿದ್ಯುದೀಕರಣಗೊಂಡ ಅರ್ಜಿಗಳು ಹಾಗೂ ಬಾಕಿ ಇರುವ ಅರ್ಜಿಗಳ ವಿವರಗಳನ್ನು ಸಭೆಯಲ್ಲಿ ಮಂಡಿಸಲಾಯಿತು. ಈ ಕುರಿತು ಜಿಲ್ಲಾವಾರು ಮಾಹಿತಿಯನ್ನು ಒದಗಿಸುವಂತೆ ಹಾಗೂ ಶೀಘ್ರವಾಗಿ ವಿದ್ಯುತ್ ಸಂಪರ್ಕವನ್ನು ನೀಡಲು ಅಧ್ಯಕ್ಷರು ಸೂಚಿಸಿದರು.

13) ಎಲ್ಲಾ ವಿ.ಸ.ಕಂಪನಿಗಳಲ್ಲಿ ಅಕ್ರಮ-ಸಕ್ರಮ ಯೋಜನೆ ಅಡಿಯಲ್ಲಿ ಮೂಲಭೂತ ಸೌಕರ್ಯ ಒದಗಿಸಿರುವ ಮತ್ತು ಠೇವಣಿ ಪಾವತಿಸಲು ಬಾಕಿ ಇರುವ ಕೃಷಿ ಪಂಪ್ ಸೆಟ್ ಗಳ ವಿವರಗಳನ್ನು ಸಭೆಯಲ್ಲಿ ಮಂಡಿಸಲಾಯಿತು.

14) ಠೇವಣಿ ಪಾವತಿಸಲು ಬಾಕಿ ಇರುವ ಕೃಷಿ ಪಂಪ್ ಸೆಟ್ ಗಳ ರೈತರುಗಳಿಗೆ ರೂ.10,000 ಗಳನ್ನು ಪಾವತಿಸಿ ತಮ್ಮ ಕೃಷಿ ಪಂಪ್ ಸೆಟ್ ಗಳನ್ನು ಸಕ್ರಮಗೊಳಿಸಿಕೊಳ್ಳುವಂತೆ ತಿಳುವಳಿಕೆ ನೀಡಲು ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

15) ಕೇಂದ್ರ ಸರ್ಕಾರದ ಮುಕ್ತಾಯಗೊಂಡ ಅನುದಾನಿತ ಯೋಜನೆಗಳಾದ RGGVY 12TH Plan, RAPDRP(PART A&B), DDUGJY, SOUBHAGYA and IPDS(PHASE-1), ಮತ್ತು ಚಾಲನೆಯಲ್ಲಿರುವ IPDS (PHASE-2), SRTPV(Souragruha yojane), RDSS and PM-KUSUM- ಈ ಎಲ್ಲಾ ಯೋಜನೆಗಳ ವಿವರಗಳನ್ನು ಸಭೆಯಲ್ಲಿ ಮಂಡಿಸಿದರು.

16) ಕರ್ನಾಟಕ ಸರ್ಕಾರದ ಯೋಜನೆಗಳಾದ Conversion of Overhead to UG/AB, Optic Fiber Cable Business of BESCOM, Nirantara Jothy Yojane(NJY), High Voltage Distribution System(HVDS), UJALA and Electric Vehicle Charging Station - ಈ ಎಲ್ಲಾ ಯೋಜನೆಗಳ ವಿವರಗಳನ್ನು ಸಭೆಯಲ್ಲಿ ಮಂಡಿಸಿದರು.

17) ಬೆವಿಕಂಪನಿಯಿಂದ ಕೈಗೊಂಡಿರುವ ಹೊಸ ಉಪಕ್ರಮ(New Initiative) ಗಳಾದ Fast Track New Connection(FTNC), Special Design Transformer, Distribution Automation System, Ease of Doing business(EODB), 1912 Helpline and Customer Interaction Meeting(CIM) - ಈ ಎಲ್ಲಾ ಯೋಜನೆಗಳ ವಿವರಗಳನ್ನು ಸಭೆಯಲ್ಲಿ ಮಂಡಿಸಿದರು.

**ಕರ್ನಾಟಕ ಸರ್ಕಾರ**

**ಆಪ್ತ ಕಾರ್ಯದರ್ಶಿ**
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕೊಠಡಿ ಸಂಖ್ಯೆ.344, 3ನೇ ಮಹಡಿ,
ವಿಧಾನಸೌಧ, ಬೆಂಗಳೂರು – 560 001
ದೂರವಾಣಿ: 080 22251568 / 22033426

ಸಂಖ್ಯೆ:ಇಕ&ಸಸ/ಆಕಾ/ಟಿ/105/2021

ದಿನಾಂಕ: 01.09.2021

## ಟಿಪ್ಪಣಿ

ದಿನಾಂಕ:18.08.2021 ರಂದು ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, ಕಂಪನಿಗಳ ಪರಿಶೀಲನಾ ಸಭೆಯ ಅನುಮೋದಿತ ನಡವಳಿಯನ್ನು ಲಗತ್ತಿಸಿದೆ. ಸಭಾ ನಡವಳಿಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ತಮ್ಮನ್ನು ಕೋರಲು ಮಾನ್ಯ ಸಚಿವರಿಂದ ನಿರ್ದೇಶಿತನಾಗಿದ್ದೇನೆ.

**(ಡಾ:ವಿಜಯ್ ಕುಮಾರ್ ಎನ್. ತೋರಗಲ್)**
ಆಪ್ತ ಕಾರ್ಯದರ್ಶಿ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಇಂಧನ ಇಲಾಖೆ.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:

1. ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಟಿ.ಸಿ.ಎಲ್.ಬೆಂಗಳೂರು
2. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ಬೆಂಗಳೂರು
3. ವ್ಯವಸ್ಥಾಪಕ ನಿರ್ದೇಶಕರು, ಚೆಸ್ಕಾಂ, ಮೈಸೂರು
4. ವ್ಯವಸ್ಥಾಪಕ ನಿರ್ದೇಶಕರು, ಮೆಸ್ಕಾಂ, ಮಂಗಳೂರು
5. ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ, ಹುಬ್ಬಳ್ಳಿ
6. ವ್ಯವಸ್ಥಾಪಕ ನಿರ್ದೇಶಕರು, ಜೆಸ್ಕಾಂ, ಕಲಬುರಗಿ
7. ವ್ಯವಸ್ಥಾಪಕರು, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, ಹುಕ್ಕೇರಿ

ದಿನಾಂಕ:18.08.2021 ರಂದು ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ಕೊಠಡಿ, ಕಾವೇರಿ ಭವನ, ಕ.ವಿ.ಪ್ರ.ನಿ.ನಿ, ಬೆಂಗಳೂರು ಇಲ್ಲಿ ನಡೆದ ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, ಕಂಪನಿಗಳ ಪರಿಶೀಲನಾ ಸಭೆಯ ನಡವಳಿಗಳು.

---

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಜಿ. ಕುಮಾರ್ ನಾಯ್ಕ್ | ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ |
| 2 | ಡಾ॥ ಎನ್. ಮಂಜುಳ | ವ್ಯವಸ್ಥಾಪಕ ನಿರ್ದೇಶಕರು, ಕೆಪಿಟಿಸಿಎಲ್, ಬೆಂಗಳೂರು |
| 3 | ಶ್ರೀ ಪಿ. ರಾಜೇಂದ್ರ ಚೋಳನ್ | ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ಬೆಂಗಳೂರು |
| 4 | ಶ್ರೀ ಕೃಷ್ಣಪ್ಪ ವಿ | ವ್ಯವಸ್ಥಾಪಕ ನಿರ್ದೇಶಕರು, ಪಿಸಿಕೆಎಲ್/ಕವಿಕಾ, ಬೆಂಗಳೂರು |
| 5 | ಶ್ರೀ ಪ್ರಶಾಂತ್ ಕೆ. ಮಿಶ್ರಾ | ವ್ಯವಸ್ಥಾಪಕ ನಿರ್ದೇಶಕರು, ಮೆಸ್ಕಾಂ, ಮಂಗಳೂರು |
| 6 | ಶ್ರೀ ಜಯವೈಭವ ಸ್ವಾಮಿ | ವ್ಯವಸ್ಥಾಪಕ ನಿರ್ದೇಶಕರು, ಸೆಸ್ಕ್, ಮೈಸೂರು |
| 7 | ಶ್ರೀ ರಾಹುಲ್ ಪಾಂಡೆ | ವ್ಯವಸ್ಥಾಪಕ ನಿರ್ದೇಶಕರು, ಜೆಸ್ಕಾಂ, ಗುಲ್ಬರ್ಗಾ |
| 8 | ಶ್ರೀಮತಿ ಡಿ ಭಾರತಿ | ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ, ಹುಬ್ಬಳ್ಳಿ |
| 9 | ಶ್ರೀ ಕೆ ಎಲ್ ಶ್ರೀನಿವಾಸ್ | ವ್ಯವಸ್ಥಾಪಕ ನಿರ್ದೇಶಕರು, ಹೆಚ್ ಆರ್ ಇ ಸಿ ಎಸ್, ಹುಕ್ಕೇರಿ |
| 10 | ಶ್ರೀ ವೆಂಕಾಟಚಲಂ ಜಿ ವಿ | ಹೆಚ್ಚುವರಿ ನಿರ್ದೇಶಕರು, ಕರ್ನಾಟಕ ಸರ್ಕಾರ |
| 11 | ಶ್ರೀ ಉಮೇಶ್ ಬಿ ಜೆ | ನಿರ್ದೇಶಕರು(ತಾಂತ್ರಿಕ), ಇಂಧನ ಇಲಾಖೆ |
| 12 | ಶ್ರೀ ಎಚ್.ಸಿ ಶ್ರೀರಾಮೇಗೌಡ | ನಿರ್ದೇಶಕರು(ತಾಂತ್ರಿಕ), ಬೆಸ್ಕಾಂ, ಬೆಂಗಳೂರು |
| 13 | ಶ್ರೀಮತಿ ಡಿ ಪದ್ಮಾವತಿ | ನಿರ್ದೇಶಕರು(ತಾಂತ್ರಿಕ), ಮೆಸ್ಕಾಂ. ಮಂಗಳೂರು |
| 14 | ಶ್ರೀ ಡಿ. ನಾಗಾರ್ಜುನ | ನಿರ್ದೇಶಕರು(ತಾಂತ್ರಿಕ), ಸೆಸ್ಕಾಂ, ಮೈಸೂರು |
| 15 | ಶ್ರೀ ಲಕ್ಷ್ಮಣ ಚೌವ್ಹಾಣ್ | (ಪ್ರ) ನಿರ್ದೇಶಕರು(ತಾಂತ್ರಿಕ), ಜೆಸ್ಕಾಂ, ಗುಲ್ಬರ್ಗಾ |
| 16 | ಶ್ರೀ ಎ. ಹೆಚ್. ಕಾಂಬ್ಲೆ | ನಿರ್ದೇಶಕರು(ತಾಂತ್ರಿಕ), ಹೆಸ್ಕಾಂ. ಹುಬ್ಬಳ್ಳಿ |
| 17 | ಡಾ॥ ಆರ್.ಸಿ. ಚೇತನ್ | ನಿರ್ದೇಶಕರು(ಹಣಕಾಸು), ಬೆಸ್ಕಾಂ. |
| 18 | ಶ್ರೀ ಬಿ. ಮಂಜುನಾಥ | ನಿರ್ದೇಶಕರು(ಹಣಕಾಸು), ಹೆಸ್ಕಾಂ. |
| 19 | ಶ್ರೀ ಪಿ. ಕೃಷ್ಣಮೂರ್ತಿ | ಮುಖ್ಯ ಪ್ರಧಾನ ವ್ಯವಸ್ಥಾಪಕರು(ಕಾರ್ಯಾಚರಣೆ), ಬೆವಿಕಂ |
| 20 | ಶ್ರೀ ಮಂಜಪ್ಪ ಜಿ. | ಮುಖ್ಯ ಪ್ರಧಾನ ವ್ಯವಸ್ಥಾಪಕರು (ಆಂತರಿಕ ಪರಿಶೋಧನೆ), ಬೆವಿಕಂ |
| 21 | ಶ್ರೀ ಟಿ ಎನ್ ಅಪ್ಪಚ್ಚು | (ಪ್ರ)ಮುಖ್ಯ ವಿದ್ಯುತ್ ಪರಿವೀಕ್ಷಕರು |
| 22 | ಶ್ರೀ ಪ್ರಕಾಶ್ ವಿ. | ಪ್ರಧಾನ ವ್ಯವಸ್ಥಾಪಕರು(ವಾಣಿಜ್ಯ), ಸೆಸ್ಕ್ |
| 23 | ಶ್ರೀ ಸಿದ್ದರಾಮ ಪಾಟೀಲ್ | (ಪ್ರ)ಅಧೀಕ್ಷಕ ಇಂಜಿನಿಯರ್, ಜೆಸ್ಕಾಂ, ಗುಲ್ಬರ್ಗಾ |

ದಿನಾಂಕ:18.08.2021 ರಂದು ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ಕೊಠಡಿ, ಕಾವೇರಿ ಭವನ, ಕ.ವಿ.ಪ್ರ.ನಿ.ನಿ, ಬೆಂಗಳೂರು ಇಲ್ಲಿ ನಡೆದ ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, ಕಂಪನಿಗಳ ಪರಿಶೀಲನಾ ಸಭೆಯ ನಡವಳಿಗಳು.

| | | |
|---|---|---|
| 24 | ಶ್ರೀಮತಿ ಜ್ಯೋತಿ ಜಿ. ಆರ್. | ಕಾರ್ಯನಿರ್ವಾಹಕ ಅಭಿಯಂತರರು, ಇಂಧನ ಇಲಾಖೆ. |
| 25 | ಶ್ರೀಮತಿ ಸುಜಾತ ಆರ್. | ಉಪಪ್ರಧಾನ ವ್ಯವಸ್ಥಾಪಕರು(ವಿ) (ನಿ.ವ್ಯ-1), ಬೆವಿಕಂ |
| 26 | ಶ್ರೀ ಸಿ. ಕೆ. ಶ್ರೀನಾಥ್ | ಉಪಪ್ರಧಾನ ವ್ಯವಸ್ಥಾಪಕರು(ಎಸ್ ಜಿ & ಇವಿ) ಬೆವಿಕಂ |
| 27 | ಶ್ರೀ ಬಿ. ಕೃಷ್ಣಮೂರ್ತಿ | ಉಪಪ್ರಧಾನ ವ್ಯವಸ್ಥಾಪಕರು(ಡಾಸ್) ಬೆವಿಕಂ |
| 28 | ಶ್ರೀ ರಮೇಶ್ ಕುಮಾರ್ ಎಮ್ ಎನ್ | (ಪ್ರ)ಸಿಎಫ್‌ಒ, ಸೆಸ್ಕ್, ಮೈಸೂರು |
| 29 | ಶ್ರೀ ಬಿ ವಿ ಗಂಗಾಧರ | ಸಿಎಫ್‌ಒ ಮೆಸ್ಕಾಂ |
| 30 | ಶ್ರೀ ಅಬ್ದುಲ್ ವಜೀದ್ | ಸಿಎಫ್‌ಒ ಜೆಸ್ಕಾಂ, ಕಲಬುರ್ಗಿ |
| 31 | ಶ್ರೀಮತಿ ಪ್ರತಿಭಾ ಕೆ. ಆರ್. | ಸಹಾಯಕ ಪ್ರಧಾನ ವ್ಯವಸ್ಥಾಪಕರು, ಇಂಧನ ಇಲಾಖೆ |
| 32 | ಶ್ರೀಮತಿ ಬಬೀತ ಬಿ. ಆರ್. | ವ್ಯವಸ್ಥಾಪಕರು, ಇಂಧನ ಇಲಾಖೆ |
| 33 | ಶ್ರೀಮತಿ ಶೃತಿ ಎಸ್. | ವ್ಯವಸ್ಥಾಪಕರು(ವಿ), (ನಿವ್ಯ-1), ಬೆವಿಕಂ. |
| 34 | ಶ್ರೀ ಎನ್. ಎಸ್. ಸರ್ ದೇಸಾಯಿ | ವ್ಯವಸ್ಥಾಪಕರು ಹೆಚ್ ಆರ್ ಇ ಸಿ ಎಸ್ |
| 35 | ಶ್ರೀ ಪಿ. ಎಸ್. ಮೋಹನ್ ಕುಮಾರ್ | ಲೆಕ್ಕಾಧಿಕಾರಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ |
| 36 | ಶ್ರೀ ಎನ್ ಜೆ. | Resident Engineer |
| 37 | ಶ್ರೀ ಕೆ. ಎಸ್. ಪ್ರಸನ್ನ | AP(P) ಪಿಸಿಕೆಎಲ್ |

7) ಕೇಂದ್ರ ಇಂಧನ ಮಂತ್ರಾಲಯದ "Revamped Distribution Sector Scheme" ಕಾರ್ಯಕ್ರಮಕ್ಕೆ ಆಗಸ್ಟ್-2021 ಅಂತ್ಯದೊಳಗೆ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಸೂಚಿಸಿದರು.

8) ನಷ್ಟ ತಡೆಯಲು ಕಾರ್ಯಯೋಜನೆ ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡುವ ಕೆಲಸವೂ ಸಹ ಕಾಲಮಿತಿಯೊಳಗೆ ಮತ್ತು ಪರಿಣಾಮಕಾರಿಯಾಗಿ ಆಗಬೇಕು.

9) ಅನಧಿಕೃತ ಸಂಪರ್ಕ, ವಿದ್ಯುತ್ ಸೋರಿಕೆ, ವಿದ್ಯುತ್ ಸಂಪರ್ಕ ನೀಡುವಲ್ಲಿ ವಿಳಂಬ ಇತ್ಯಾದಿ ಕಾರಣಗಳಿಂದ ಇಂಧನ ಸರಬರಾಜು ಕಂಪನಿಗಳಿಗಾಗುವ ನಷ್ಟ ತಡೆಯಲು ಕಾರ್ಯಯೋಜನೆ ರೂಪಿಸಿ ಅದನ್ನು ಅನುಷ್ಠಾನಗೊಳಿಸಲು ಸೂಚಿಸಿದರು.

10) ಹಲವಾರು ವರ್ಷಗಳಿಂದ ಶೇಕಡಾ 20-30ರಷ್ಟು ಸ್ಥಾವರಗಳಿಗೆ ಈಗಲೂ ಸಹ Electromechanical ಮಾಪಕಗಳಿರುವ ಬಗ್ಗೆ ಹಾಗೂ ಇವುಗಳಿಂದ ವಿದ್ಯುತ್ ಬಳಕೆಯ ದಾಖಲಾತಿ ಸಮರ್ಪಕವಾಗಿಲ್ಲವೆಂಬ ವಿಷಯವನ್ನು ವಿಸಕಂಗಳು ತಿಳಿಸಿರುವುದನ್ನು ಗಮನಿಸಲಾಗಿ, ಈ Electromechanical ಮಾಪಕಗಳನ್ನು ಹಾಗೂ ದಾಖಲು ಮಾಡದ (MNR) ಮಾಪಕಗಳನ್ನು ನಿರಂತರವಾಗಿ ಗುರುತಿಸುವುದು ಮತ್ತು ಬದಲಾವಣೆಯನ್ನು ಮಾಡುವುದು ವಿಸಕಂಗಳ ದೈನಂದಿನ ಕಾರ್ಯಚಟುವಟಿಕೆಯಾಗಿರುವುದರಿಂದ, ಪ್ರತ್ಯೇಕ ನಿರ್ದೇಶನಕ್ಕೆ ಕಾಯದೆ, ವಿಸಕಂಗಳು ಕಾರ್ಯಪ್ರವೃತ್ತರಾಗುವುದು.

11) ವಿದ್ಯುತ್ ಚಾಲಿತ ವಾಹನಗಳು ಹೆಚ್ಚಾಗಿ ಬರುತ್ತಿರುವುದರಿಂದ, ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳನ್ನು ಆರಂಭಿಸಲು ಆದ್ಯತೆ ಹಾಗೂ ಈಗಾಗಲೇ ಗುರುತಿಸಿರುವ ಸ್ಥಳಗಳಲ್ಲಿ ವಿದ್ಯುತ್ ರೀಚಾರ್ಜಿಂಗ್ ಮಾಡುವ ಕಾರ್ಯಕ್ಕೆ ವೇಗ ನೀಡುವಂತೆ ಸೂಚಿಸಿದರು.

12) ಹೊಸ ವಿದ್ಯುತ್ ಸಂಪರ್ಕ ನೀಡಿಕೆ ಸೇರಿದಂತೆ ವಿವಿಧ ಸೇವೆಗಳನ್ನು 24 ಗಂಟೆಯೊಳಗೆ ಒದಗಿಸುವ ಫಾಸ್ಟ್ರಾಕ್ ಸೆಲ್ ವ್ಯವಸ್ಥೆ ಅನ್ನು (ಬೆವಿಕಂಪನಿಯಲ್ಲಿರುವಂತೆ) ಉಳಿದ ವಿ.ಸ.ಕಂಪನಿಗಳು ಅಳವಡಿಸಿಕೊಳ್ಳಲು ಆದೇಶಿಸಿದರು.

a. ಹೊಸ ವಿದ್ಯುತ್ ಸಂಪರ್ಕ (New Connections).

b. ಹೆಸರು ಬದಲಾವಣೆ (Name change).

c. ಜಕಾತಿ (Tariff) ಬದಲಾವಣೆ (Change of tariff).

d. ವಿದ್ಯುತ್ ಹೊರೆಯ ಹೆಚ್ಚಳ / ಇಳಿಕೆ (Load enhancement / reduction).

13) Fast track Cell ಕುರಿತು ಬೆಸ್ಕಾಂ ವತಿಯಿಂದ ಒಂದು ವಾರದೊಳಗೆ ಕಾರ್ಯಾಗಾರವನ್ನು ಆಯೋಜಿಸುವುದು ಹಾಗೂ Fast track Cell ಬದಲಿಗೆ ಕನ್ನಡದ ಸೂಕ್ತ ಹೆಸರನ್ನು ನೀಡಲು ಸೂಚಿಸಿದರು.

14) ಮುಂದಿನ 100 ದಿನಗಳ ಕಾಲಮಿತಿಯಲ್ಲಿ ಏನೆಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸಬಹುದು ಎಂಬ ಬಗ್ಗೆ ಪರಾಮರ್ಶೆ ಮಾಡುವಂತೆ ತಿಳಿಸಿದರು.

15) ಅರಣ್ಯ ಇಲಾಖೆಯಲ್ಲಿ ಬಾಕಿ ಇರುವ ಕೆಪಿಟಿಸಿಎಲ್ ಮತ್ತು ವಿಸಕಂಗಳ ಪ್ರಸ್ತಾವನೆಗಳ ಬಗ್ಗೆ ಚರ್ಚಿಸಲು 10 ದಿನಗಳೊಳಗೆ ಸಭೆಯನ್ನು ಆಯೋಜಿಸಲು ಸೂಚಿಸಿದರು.

16) ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳ / ನಗರ ಪ್ರದೇಶಗಳಲ್ಲಿ ಪಾದಚಾರಿ ಮಾರ್ಗಗಳ ಮೇಲೆ ಅಳವಡಿಸಿರುವ ಪರಿವರ್ತಕ ಕೇಂದ್ರಗಳನ್ನು (DTC), ಉಚ್ಚ ನ್ಯಾಯಾಲಯದ ಆದೇಶದಂತೆ Special Design Transformer Centre ಗಳ ಅಳವಡಿಕೆಯಿಂದ ಪೂರ್ಣಗೊಳಿಸಲು ಕ್ರಮವಹಿಸಲು ಸೂಚಿಸಿದರು.

17) ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳ / ನಗರ ಪ್ರದೇಶಗಳಲ್ಲಿ Overhead ಮಾರ್ಗಗಳನ್ನು ಭೂಗತ ಕೇಬಲ್ ನೊಂದಿಗೆ ಬದಲಾಯಿಸುವ ಬಗ್ಗೆ ಆರ್ಥಿಕ ಕಾರ್ಯಸಾಧ್ಯತೆಯನ್ನು ಪರಿಶೀಲಿಸಿ, ಕ್ರಮ ವಹಿಸುವುದು.

18) ಬೆವಿಕಂಪನಿ ವ್ಯಾಪ್ತಿಯ ಕೆಜಿಎಫ್ ಉಪವಿಭಾಗಕ್ಕೆ ಜುಲೈ ತಿಂಗಳ ಅತ್ಯುತ್ತಮ ಕಾರ್ಯ ನಿರ್ವಹಣೆಗಾಗಿ ಪ್ರಶಸ್ತಿ ಫಲಕ ಮತ್ತು ರೂ 10 ಸಾವಿರ ನಗದು ಬಹುಮಾನವನ್ನು ಅಧ್ಯಕ್ಷರು ನೀಡಿದರು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು,

(ಸಹಿ) 3/9/21
ವಿ ಸುನಿಲ್ ಕುಮಾರ್
ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕಡತ ಸಂಖ್ಯೆ:-------------------

ದಿನಾಂಕ:

ಇವರಿಗೆ,

1.

---

3) Open Access ವಿಷಯ ಕುರಿತು ಸಭೆಯಲ್ಲಿ ಚರ್ಚಿಸಲ್ಪಟ್ಟಿದ್ದು, ಬೆವಿಕಂಪನಿಯ HT ಗ್ರಾಹಕರು Open Access ಅನ್ನು ಆಯ್ಕೆ ಮಾಡುತ್ತಿರುವುದರಿಂದ ಬೆವಿಕಂಪನಿಗೆ ಕಂದಾಯ ನಷ್ಟ ಮತ್ತು Cross Subsidy ಯಲ್ಲಿ ತೊಂದರೆ ಉಂಟಾಗುತ್ತಿದೆ.

4) ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಒಟ್ಟು ಮಂಜೂರಾದ ಹುದ್ದೆಗಳಲ್ಲಿ, 55% ಅಧಿಕಾರಿ/ನೌಕರರುಗಳು ಕಾರ್ಯನಿರ್ವಹಿಸುತ್ತಿದ್ದು, ಶೇಕಡಾ 45 ರಷ್ಟು ಹುದ್ದೆಗಳು ಖಾಲಿಯಿರುತ್ತದೆ. ಈ ಪೈಕಿ Group D(Power Man) ವೃಂದದ ಶೇಕಡಾ 47 ರಷ್ಟು ಹುದ್ದೆಗಳು ಖಾಲಿ ಇದ್ದು ಮಾರ್ಗ ನಿರ್ವಹಣೆ ಕಾರ್ಯದಲ್ಲಿ ಸಮಸ್ಯೆಯಾಗುತ್ತಿದ್ದು, ಶೀಘ್ರವಾಗಿ ನೇಮಕಾತಿ ಮಾಡುವುದರಿಂದ ಅನುಕೂಲವಾಗುತ್ತದೆ ಎಂದು ತಿಳಿಸಿದರು.

5) Source wise Installed Capacity, Escom wise Consumption, RPO Obligations ಬಗ್ಗೆ ಅಪರ ಮುಖ್ಯ ಕಾರ್ಯದರ್ಶಿ ರವರು ವಿವರಿಸಿದರು.

6) ಕಂಪನಿವಾರು ವಿವಿಧ ವರ್ಗಗಳ ಗ್ರಾಹಕರ ಸಂಖ್ಯೆ, ವಿದ್ಯುತ್ ಬಳಕೆಯ ವಿವರ, 2020-21 ರಿಂದ 2029-30 ರವರೆಗಿನ ವಿದ್ಯುತ್ ಬೇಡಿಕೆ ಮತ್ತು ಲಭ್ಯತೆ ಹಾಗೂ ಆ.ವ 2020-21 (ಆಗಸ್ಟ್-21) ರಲ್ಲಿ IEX ಮೂಲಕ ವಿ.ಸ.ಕಂಪನಿಗಳಿಂದ ಮಾರಾಟ ಮಾಡಲಾದ ವಿದ್ಯುತ್ ನ ವಿವರಗಳನ್ನು ಸಭೆಯಲ್ಲಿ ಮಂಡಿಸಿದರು.

7) ವಿದ್ಯುತ್ ಸರಬರಾಜು ಕಂಪನಿಗಳಿಗೆ 30.06.2021 ರ ಅಂತ್ಯಕ್ಕೆ ಎಲ್ಲಾ ಮೂಲಗಳಿಂದ ಬರಬೇಕಾಗಿರುವ ವಿದ್ಯುತ್ ಬಾಕಿ ಒಟ್ಟು ಮೊತ್ತ ರೂ.19843.83 ಕೋಟಿಗಳು ಹಾಗೂ ವಿ.ಸ.ಕಂಪನಿಗಳಿಂದ ಪಾವತಿಸಲು ಬಾಕಿ ಇರುವ ಒಟ್ಟು ಮೊತ್ತ ರೂ.14622.2 ಕೋಟಿಗಳಾಗಿರುತ್ತದೆ ಎಂದು ತಿಳಿಸಿದರು..

8) ವಿದ್ಯುತ್ ನಷ್ಟವನ್ನು ಕಡಿಮೆಗೊಳಿಸುವುದಕ್ಕಾಗಿ ಎಲ್ಲಾ 11 K.V ಫೀಡರ್ ಹಾಗೂ ವಿದ್ಯುತ್ ವಿತರಣಾ ಪರಿವರ್ತಕಗಳ ಹಂತಗಳಲ್ಲಿ ಆಡಿಟ್ ಮಾಡಲಾಗುತ್ತಿದೆ ಎಂದು ತಿಳಿಸಿರುತ್ತಾರೆ. ಈ ಸಂದರ್ಭದಲ್ಲಿ ಅಪರ ಮುಖ್ಯ ಕಾರ್ಯದರ್ಶಿರವರು ಎನರ್ಜಿ ಆಡಿಟ್ನ ಕಾರ್ಯಚಟುವಟಿಕೆ ಬಗ್ಗೆ ವಿವರಣೆ ನೀಡಿದರು.

9) ಬೆವಿಕಂಪನಿಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ಎನರ್ಜಿ ಆಡಿಟ್ ನ ಕಾರ್ಯವಿಧಾನವನ್ನು ವಿವರಿಸಿದರು.

10) ಎಲ್ಲಾ ವಿ.ಸ.ಕಂಪನಿಗಳಲ್ಲಿ ಗಂಗಾಕಲ್ಯಾಣ ಯೋಜನೆ ಅಡಿಯಲ್ಲಿ ವಿದ್ಯುದೀಕರಣಕ್ಕಾಗಿ ನೊಂದಾವಣೆಗೊಂಡ ಅರ್ಜಿಗಳು, ವಿದ್ಯುದೀಕರಣಗೊಂಡ ಅರ್ಜಿಗಳು ಹಾಗೂ ಬಾಕಿ ಇರುವ ಅರ್ಜಿಗಳ ವಿವರಗಳನ್ನು ಸಭೆಯಲ್ಲಿ ಮಂಡಿಸಲಾಯಿತು. ಬ್ಾಕಿ ಇರುವ ಹಾಗೂ ಹೊಸದಾಗಿ ನೊಂದಣಿಗೊಳ್ಳುವ ಅರ್ಜಿಗಳ ಕೃಷಿ ಪಂಪ್ ಸೆಟ್ ಗಳಿಗೆ ಉಪವಿಭಾಗದ ಹಂತದಲ್ಲಿಯೇ ಮೈಕ್ರೋಲೆವೆಲ್ ಪರಿಶೀಲನೆ ನಡೆಸಿ ಕಾರ್ಯಯೋಜನೆಯನ್ನು ರೂಪಿಸಿ, ತ್ವರಿತವಾಗಿ ಕ್ರಮ ವಹಿಸುವಂತೆ ಸೂಚಿಸಿದರು.

ದಿನಾಂಕ:18.08.2021 ರಂದು ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ಕೊಠಡಿ, ಕಾವೇರಿ ಭವನ, ಕ.ವಿ.ಪ್ರ.ನಿ.ನಿ, ಬೆಂಗಳೂರು ಇಲ್ಲಿ ನಡೆದ ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, ಕಂಪನಿಗಳ ಪರಿಶೀಲನಾ ಸಭೆಯ ನಡವಳಿಗಳು.

---

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆರವರು ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರನ್ನು ಸಭೆಗೆ ಸ್ವಾಗತಿಸಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು.

ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂಪನಿ ರವರು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಕಾರ್ಯ ಚಟುವಟಿಕೆಗಳು, ವಿವಿಧ ಯೋಜನೆ/ಕಾರ್ಯಕ್ರಮಗಳ ಪ್ರಗತಿ, ಆರ್ಥಿಕ ಪರಿಸ್ಥಿತಿ ಮುಂತಾದವುಗಳ ಕುರಿತ ಪ್ರಾತ್ಯಕ್ಷಿಕೆಯನ್ನು ಸಭೆಯಲ್ಲಿ ಪ್ರಸ್ತುತಪಡಿಸಿದರು.

1) ವಿದ್ಯುತ್ ಕ್ಷೇತ್ರದ ಇತಿಹಾಸ , ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿ, ಸಂಕ್ಷಿಪ್ತ ನೋಟ ಹಾಗೂ ಕಂಪನಿಗಳ ವ್ಯವಹಾರಗಳ ಕುರಿತು ವಿವರಿಸಿದರು:
   a. ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಪರಿವರ್ತಕಗಳ ಶೇಕಡಾವಾರು ವಿಫಲತೆಯು ನಗರ ಪ್ರದೇಶಗಳಿಗಿಂತ ಹೆಚ್ಚಾಗಿರುವ ಕಾರಣ, ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆರವರು ಸಾಕಷ್ಟು ಪ್ರಮಾಣದಲ್ಲಿ ವಿದ್ಯುತ್ ವಿತರಣಾ ಪರಿವರ್ತಕಗಳನ್ನು ಮಾನ್ಯ ಕೆ.ಇ.ಆರ್.ಸಿ ರವರ ನಿಯಮಾವಳಿಗಳ ಅನ್ವಯ ದಾಸ್ತಾನು ಇರಿಸಲು ಹಾಗೂ ವಿತರಣ ಪರಿವರ್ತಕಗಳ ದುರಸ್ತಿಯ ಗುಣಮಟ್ಟ, ವಿಫಲಗೊಂಡ ಪರಿವರ್ತಕಗಳ ಸಾಗಾಣಿಕೆ ಮಾಡುವ ವಾಹನಗಳ ಸ್ಥಿತಿಯನ್ನು ಉತ್ತಮ ಮಟ್ಟದಲ್ಲಿ ಕಾಯ್ದುಕೊಂಡು, ದುರಸ್ಥಿ ಕಾರ್ಯನಿರ್ವಹಣೆಯನ್ನು ತಂತ್ರಾಂಶದ ಮೂಲಕ ಮೇಲ್ವಿಚಾರಣೆ ಮಾಡಿ, ವೇಗಗೊಳಿಸಿ 24 ಘಂಟೆಗಳ ಒಳಗಾಗಿ ಬದಲಾಯಿಸುವಂತೆ ನಿರ್ದೇಶಿಸಿದರು.
   b. ವ್ಯವಸ್ಥಾಪಕ ನಿರ್ದೇಶಕರು, ಕವಿಕಾ ರವರು ವಿ.ಸ.ಕಂಪನಿಗಳ ಅಗತ್ಯಕ್ಕೆ ತಕ್ಕಂತೆ ಗುಣಮಟ್ಟದ ವಿತರಣಾ ಪರಿವರ್ತಕಗಳನ್ನು ಪೂರೈಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

2) ಎಲ್ಲಾ ವಿ.ಸ.ಕಂಪನಿಗಳ Billing and Collection Efficiency ಯನ್ನು Interface Point ನಲ್ಲಿ ದಾಖಲಾದ ವಿದ್ಯುತ್ ಮತ್ತು ಮಾರಾಟ ಮಾಡಲಾದ ವಿದ್ಯುತ್ ಪ್ರಮಾಣದ ಮೇಲೆ ಲೆಕ್ಕಾಚಾರ ಮಾಡಲಾಗುವುದು ಹಾಗೂ ಕೋವಿಡ್-19 ಇದ್ದ ಕಾರಣ ಆರ್ಥಿಕ ವರ್ಷ 2020-21 ರಲ್ಲಿ Billing and Collection Efficiency ಯಲ್ಲಿ ವ್ಯತ್ಯಾಸ ಇರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ ರವರು ತಿಳಿಸಿದರು.